ಅನುದಾನ ಮಂಜೂರಾತಿ

21 (42)

ಶ್ರೀ ಈಶ್ವರ ಬೀಮಣ್ಣ ಖಂಡ್ರೆ (ಭಾಲ್ಕಿ)

ಅ) 2009–10, 2010–11, 2011–12 ನೇ ಸಾಲಿನಲ್ಲಿ ಬೀದರ ಜಿಲ್ಲೆಗೆ ವಿವಿಧ ಕಾರ್ಯಕ್ರಮದಡಿಯಲ್ಲಿ ಎಷ್ಟು ಹಣ ಮಂಜೂರಾಗಿದೆ (ಕಾರ್ಯಕ್ರಮಗಳ ಸಂಪೂರ್ಣ ವಿವರ ನೀಡುವುದು) ;

ಆ) ಇಲಾಖೆಯ ಕಾರ್ಯಕ್ರಮಗಳಾದ ಹೊಸ ಅಂಗನವಾಡಿ ಕಟ್ಟಡ, ಸ್ತ್ರೀ ಶಕ್ತಿಭರ್ತಿ, ಭಾಗ್ಯಲಕ್ಷ್ಮಿ ಬಾಂಡ್ ಕಾರ್ಯಕ್ರಮಗಳು ಸಮರ್ಪಕವಾಗಿ ನಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ವಿಳಂಬಕ್ಕೆ ಕಾರಣರಾದವರ ವಿರುದ್ದ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಳಕಪ್ಪ ಜಿ.ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) ಅ) 2009–10, 2010–11, 2011–12 ನೇ ಸಾಲಿನಲ್ಲಿ ಬೀದರ ಜಿಲ್ಲೆಗೆ ವಿವಿಧ ಕಾರ್ಯಕ್ರಮದಡಿಯಲ್ಲಿ ಮಂಜೂರಾದ ಅನುದಾನದ ವಿವರಗಳನ್ನು ಅನುಬಂ–ಧದಲ್ಲಿ ಒದಗಿಸಲಾಗಿದೆ.

ಆ) ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಇದುವರೆಗೆ ಬೀದರ ಜಿಲ್ಲೆಯಲ್ಲಿ 1 ಜಿಲ್ಲಾ ಸ್ತ್ರೀಶಕ್ತಿ ಭವನ/ ಮಳಿಗೆ ಹಾಗೂ 5 ತಾಲ್ಲೂ–ಕುಗಳಲ್ಲಿ ಭವನ/ ಮಳಿಗೆ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಇದುವರೆಗೆ ಜಿಲ್ಲಾ ಮಾರುಕಟ್ಟೆ ಸಂಕೀರ್ಣ ಹಾಗೂ ಸಂತಪುರ ಮತ್ತು ಬಸವ ಕಲ್ಯಾಣ ತಾಲ್ಲೂಕುಗಳಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ಇಲಾಖಾ ವಶಕ್ಕೆ ಪಡೆಯಲಾಗಿದೆ. ಬೀದರ ಮತ್ತು ಭಾಲ್ಕಿ ತಾಲ್ಲೂಕುಗಳಲ್ಲಿ ಕಾಮಗಾರಿ ವಿವಿಧ ಹಂತಗಳಲ್ಲಿದ್ದು, ಹುಮನಾಬಾದ ತಾಲ್ಲೂಕಿನಲ್ಲಿ ಕಾಮಗಾರಿ ಪ್ರಾರಂಭಿಸ–ಬೇಕಾಗಿದೆ. 2011–12 ನೇ ಸಾಲಿನಲ್ಲಿ ಹೊಸ ಅಂಗನವಾಡಿ ಕಟ್ಟಡ ನಿರ್ಮಾಣಕ್ಕೆ ಅನುದಾನವನ್ನು ವರ್ಷಾಂತ್ಯದಲ್ಲಿ ಬಿಡುಗಡೆಯಾದ ಕಾರಣ ಕಟ್ಟಡಗಳ ನಿರ್ಮಾಣವು ಪೂರ್ಣಗೊಂಡಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 42 ರ ಉತ್ತರಕ್ಕೆ ಅನುಬಂಧ

ಕ್ರಮ. ಸಂ ಖ್ಯೆ	ಯೋಜನೆಯ ಹೆಸರು	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)		
		2009–10	2010–11	2011–12
1	ಸಾಂತ್ವನ	4.40	37.70	25.76
2	ಬಾಲಕಿಯರ ವಸತಿ ನಿಲಯ	24.00	23.54	27.03
3	ಮಹಿಳಾ ಕಾನೂನು ಪದವೀಧರರಿಗೆ ಆರ್ಥಿಕ ಸಹಾಯ	1.26	2.12	0.84
4	ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆ.	5.78	12.40	4.85
5	ಶಿಶುಪಾಲನಾ ಕೇಂದ್ರ	4.98	9.65	6.00
6	ಕಿಶೋರಿ ಶಕ್ತಿ ಯೋಜನೆ	2.75	2.75	2.75
7	ಅಪೌಷ್ಟಿಕ ಮಕ್ಕಳ ವೈದ್ಯಕೀಯ ವೆಚ್ಚ	1.49	2.99	4.53
8	ಸ್ವಾಧಾರಯೋಜನೆ (ಕೇಂ.ಪು.ಯೋ)	29.734	23.238	22.343
9	ಬಾಲ್ಯ ವಿವಾಹ ನಿಷೇದದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ	--	--	0.42
10	ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಕೇಂ.ಪು.ಯೋ)	1006.00	862.66	1167.16
11	ಪೂರಕ ಪೌಷ್ಟಿಕ ಆಹಾರ ವಿತರಣೆ ಕಾರ್ಯಕ್ರಮ	1883.30	2234.40	2372.77
12	ಸ್ತ್ರೀ ಶಕ್ತಿ ಯೋಜನೆ	18.76	19.18	18.03
13	ವಿಶೇಷ ಅಭಿವೃದ್ಧಿ ಯೋಜನೆ	5.90	20.85	1.64
14	ತಾಲ್ಲೂಕು ಮಟ್ಟದಲ್ಲಿ ಸ್ತ್ರೀ ಶಕ್ತಿ ಭವನಗಳ ನಿರ್ಮಾಣ	10.00	--	10.00

ಕ್ರಮ. ಸಂ.	ಯೋಜನೆಯ ಹೆಸರು	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)		
		2009–10	2010–11	2011–12
15	ಅಂಗನವಾಡಿ ಕಟ್ಟಡಗಳ ನಿರ್ಮಾಣ (ಆರ್. ಐ. ಡಿ.ಎಫ್.)	51.75	371.25	83.60
16	ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಅಂಗನವಾಡಿ ಕಟ್ಟಡಗಳ ನಿರ್ಮಾಣ	120.00	212.80	140.09
17	ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರಿಗೆ ಮರಣ ಪರಿಹಾರ/ ವೈದ್ಯಕೀಯ ವೆಚ್ಚ ಮರುಪಾವತಿ.	0.30	0.50	0.90
18	ಅಂಗನವಾಡಿ ಕಟ್ಟಡಗಳ ನಿರ್ಮಾಣ	--	5.00	5.00
19	ಅಂಗನವಾಡಿ ಕಾರ್ಯಕರ್ತೆ ಸಹಾಯಕಿಯರಿಗೆ ಹೆಚ್ಚುವರಿ ಗೌರವಧನ	304.55	306.18	532.16
20	ನಿರ್ಗತಿಕ ಮಕ್ಕಳ ಕುಟೀರ ಕಾರ್ಯಕ್ರಮ	29.34	29.87	49.68
21	ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರಿಗೆ ಹಾಜರಾತಿ ಶಿಷ್ಯವೇತನ	6.00	6.00	6.00

ಕ್ರಮ. ಸಂ.	ಯೋಜನೆಯ ಹೆಸರು	ಮಂಜೂರಾದ ಅನುದಾನ (ರೂ.ಲಕ್ಷಗಳಲ್ಲಿ)		
		2009–10	2010–11	2011–12
22	ಭಾಗ್ಯಲಕ್ಷ್ಮಿ ಯೋಜನೆ	1247.552	2450.328	737.263
23	ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಟ ನಿವಾರಣಾ ಯೋಜನೆ	0.33	0.70	1.24
24	ಹೊಯ್ಸಳ ಮತ್ತು ಕೆಳದಿ ಚನ್ನಮ್ಮ ಪ್ರಶಸ್ತಿ	0.816	0.816	0.816

55 (84)

ಶ್ರೀ ರೇವಣ್ಣ ಹೆಚ್.ಡಿ.ಶಾಸಕರು (ಹೊಳೇನರಸೀಪುರ ವಿಧಾನ ಸಭಾ ಕ್ಷೇತ್ರ)

ಅ) ರಾಜ್ಯದಲ್ಲಿರುವ ಕೆ.ಎಂ.ಎಫ್. ವ್ಯಾಪ್ತಿಯ ಪಶು ಆಹಾರ ಘಟಕಗಳೆಷ್ಟು; ಈ ಘಟಕಗಳಿಂದ ಪ್ರತಿ ತಿಂಗಳು ಉತ್ಪಾದಿಸುವ ಪಶು ಆಹಾರದ ಪ್ರಮಾಣ ಎಷ್ಟು;

ಆ) ರಾಜ್ಯದ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಗಳ ಮಾಸಿಕ ಪಶು ಆಹಾರ ಬೇಡಿಕೆ ಪ್ರಮಾಣ ಎಷ್ಟು; ಒಕ್ಕೂಟಗಳ ಬೇಡಿಕೆಗೆ ಅನುಗುಣವಾಗಿ ಕೆ.ಎಂ.ಎಫ್. ವತಿಯಿಂದ ಪಶು ಆಹಾರ ಸರಬರಾಜು ಮಾಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ ಇದಕ್ಕೆ ಕಾರಣವೇನು;

ಇ) ಕೆ.ಎಂ.ಎಫ್. ನಲ್ಲಿ ಕಳೆದ ನಾಲ್ಕು ವರ್ಷಗಳ ಹಿಂದೆಯೇ ಬೆಂಗಳೂರು ನಗರದ ಹೊರವಲಯದ ಕುಂಬಳಗೋಡು ಹಾಗೂ ಹಾಸನದಲ್ಲಿ ಪಶು ಆಹಾರ ಘಟಕ ಸ್ಥಾಪನೆಗಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ ಹಾಗೂ ಕರ್ನಾಟಕ ಹಾಲು ಮಹಾ ಮಂಡಳಿಯು ಕಳೆದ ನಾಲ್ಕು ವರ್ಷಗಳ ಹಿಂದೆಯೇ ಅನುಮತಿ ನೀಡಿದ್ದರೂ ಸಹ ಪಶು ಆಹಾರ ಘಟಕದ ಸ್ಥಾಪನೆ ಮಾಡದಿರಲು ಕಾರಣವೇನು;